# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 29.10.2024ರಂದು ಪೂರ್ವಾಹ್ನ ಗಂಟೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2024ನೇ ಸಾಲಿನ ಆರನೇ ಸಾಮಾನ್ಯ ಸಭೆಯ ನಡವಳಿಗಳು**

## ಉಪಸ್ಥಿತರು:

| ಕ್ರ.ಸಂ | | | |
|---|---|---|---|
| 1. | ಪ್ರೊ ಪಿ ಎಲ್.ಧರ್ಮ<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ ರಾಮೇಗೌಡ ಎಂ<br>ಜಂಟಿ ನಿರ್ದೇಶಕರು,(ಕಾಲೇಜು ಶಿಕ್ಷಣ ಆಯಕ್ತರ ಪರವಾಗಿ) | ಸದಸ್ಯರು | ವೀಡಿಯೋ ಕಾನ್ಫರೆನ್ಸ್ ಮೂಲಕ |
| 3. | ಪ್ರೊ ಎಂ ಜಯಶಂಕರ್<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು | |
| 4. | ಡಾ ಎಸ್.ಬಿ ಎಂ ಪ್ರಸನ್ನ | ಸದಸ್ಯರು | |
| 5. | ಡಾ ಕೆ.ಸಿ. ಮಹದೇಶ | ಸದಸ್ಯರು | |
| 6. | ಡಾ. ಶಂಕರಮೂರ್ತಿ ಎಚ್.ಕೆ | ಸದಸ್ಯರು | |
| 7. | ಡಾ ವರದರಾಜ ಸಿ ಎಚ್. | ಸದಸ್ಯರು | |
| 8. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು | |
| 9. | ಶ್ರೀ. ಸಿ.ಎ. ನಿತಿನ್ ಜೆ ಶೆಟ್ಟಿ | ಸದಸ್ಯರು | |
| 10. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು | |
| 11. | ಶ್ರೀ ರಘುರಾಜ್ | ಸದಸ್ಯರು | |
| 12. | ಶ್ರೀ ಅಚ್ಯುತ ಗಟ್ಟಿ | ಸದಸ್ಯರು | |
| 13. | ಶ್ರೀ ಮಹಮ್ಮದ್ ಸವಾದ್ | ಸದಸ್ಯರು | ವೀಡಿಯೋ ಕಾನ್ಫರೆನ್ಸ್ ಮೂಲಕ |
| 14. | ಡಾ. ಸಂದೇಶ್ ಕೆ.ಎಸ್.,<br>(ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ) | ಸದಸ್ಯರು | ವೀಡಿಯೋ ಕಾನ್ಫರೆನ್ಸ್ ಮೂಲಕ |
| 15. | ಪ್ರೊ ಹೆಚ್. ದೇವೇಂದ್ರಪ್ಪ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 16. | ಪ್ರೊ ಸಂಗಪ್ಪ ವೈ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು | |
| 17. | ಶ್ರೀ ಕೆ ರಾಜು ಮೊಗವೀರ, ಕೆ.ಎ.ಎಸ್.<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ | |

## <u>ಪ್ರಾರಂಭಿಕ</u>

**ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.**

## ಪ್ರಾಸ್ತಾವಿಕ

ಮಾನ್ಯ ಕುಲಪತಿಯವರು ಸಭೆಯಲ್ಲಿ ಮಾತನಾಡುತ್ತಾ, ಈ ಕೆಳಗಿನ ವಿಚಾರಗಳನ್ನು ಸಭೆಯ ಗಮನಕ್ಕೆ ತಂದರು.

1) ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿಯಾಗಿದ್ದು ತರಗತಿಗಳು ಶೈಕ್ಷಣಿಕ ವೇಳಾಪಟ್ಟಿಯಂತೆ ಪ್ರಾರಂಭವಾಗಿವೆ.

2) ಸರ್ಕಾರದಿಂದ ರೂ. 1.00 ಕೋಟಿ ಅಭಿವೃದ್ಧಿ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನ ಬಳಸಿಕೊಳ್ಳುವ ಬಗ್ಗೆ ಮೂರು - ನಾಲ್ಕು ಸಭೆಗಳನ್ನು ನಡೆಸಿ ಕ್ರಿಯಾಯೋಜನೆಗಳನ್ನು ತಯಾರಿಸಲಾಗುತ್ತಿದೆ.

3) ಕುಂದ ಕನ್ನಡ ಅಭಿವೃದ್ಧಿಗೆ ರೂ. 50 ಲಕ್ಷ ರೂಪಾಯಿ ಅನುದಾನ ಬಿಡುಗಡೆಯಾಗಿರುತ್ತದೆ.

4) ಇತರ ವಿಶ್ವವಿದ್ಯಾನಿಲಯಗಳ ಪರೀಕ್ಷೆ ಮತ್ತು ಫಲಿತಾಂಶಗಳು ನಮ್ಮ ವಿಶ್ವವಿದ್ಯಾನಿಲಯಕ್ಕಿಂತ ಎರಡು ತಿಂಗಳು ಹಿಂದಿರುವುದರಿಂದ, ವಿದ್ಯಾರ್ಥಿಗಳು ಪ್ರವೇಶಾತಿ ಕೋರಿ ಬಂದಲ್ಲಿ ದಾಖಲು ಮಾಡಿಕೊಳ್ಳಲು ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳಿಗೆ ಅನುಮತಿಸಲಾಗಿದೆ.

5) ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡಗಳ ವಿದ್ಯಾರ್ಥಿಗಳ ಶುಲ್ಕ ನೇರವಾಗಿ ಡಿ.ಬಿ.ಟಿ. ಮೂಲಕ ವಿದ್ಯಾರ್ಥಿಗಳಿಗೆ ಪಾವತಿಯಾಗುತ್ತಿದ್ದು, ಪಾವತಿಯಾದ ಹಣವನ್ನು ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಮರುಪಾವತಿಸುತ್ತಿಲ್ಲ, ಇದರಿಂದಾಗಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗುತ್ತಿದೆ. ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಪತ್ರ ವ್ಯವಹಾರ ಮಾಡಲಾಗುವುದು.

**ಕೃತಜ್ಞತೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 28(1)(ಎಫ್)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ **ಫಾ. ಡಾ. ಮೈಕಲ್ ಸಂತುಮಯೋರ್,** ಪ್ರಾಂಶುಪಾಲರು, ಮಿಲಾಗ್ರಿಸ್ ಕಾಲೇಜು, ಹಂಪನಕಟ್ಟೆ, ಮಂಗಳೂರು ಹಾಗೂ **ಡಾ. ಜೋಶ್ನ ರಾವ್,** ಪ್ರಾಂಶುಪಾಲರು, ಪ್ರೇಮಕಾಂತಿ ಕಾಲೇಜ್ ಆಫ್ ಎಜುಕೇಶನ್, ಮಣ್ಣಗುಡ್ಡೆ, ಮಂಗಳೂರು ಇವರುಗಳ ಸದಸ್ಯತ್ವದ ಅವಧಿಯು ಕೊನೆಗೊಂಡಿರುವುದರಿಂದ ಸಿಂಡಿಕೇಟ್ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

ಇವರಿಬ್ಬರು ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುತ್ತಾರೆ. ಇವರಿಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

**I. ನಡವಳಿಗಳ ದೃಢೀಕರಣ**

**ದಿನಾಂಕ 04.09.2024ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಐದನೇ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ**

ಶ್ರೀಮತಿ ಗೀತಾ ಕೆ., ಶೀಘ್ರಲಿಪಿಗಾರ್ತಿ ಇವರನ್ನು ಕರ್ನಾಟಕ ಸಚಿವಾಲಯದಲ್ಲಿ ಖಾಲಿ ಇರುವ ಶೀಘ್ರಲಿಪಿಗಾರ ಹುದ್ದೆಗೆ ನೀಡಿರುವ ನಿಯೋಜನಾ ಸೇವೆಯನ್ನು ಒಪ್ಪಂದದ ಆಧಾರದಲ್ಲಿ ನೇಮಕ ಎಂದು ಪರಿಗಣಿಸುವ ಬಗ್ಗೆ ಮಂಡಿಸಿದ್ದ ಕಾರ್ಯಸೂಚಿ ಸಂಖ್ಯೆ ಸಿಬ್ಬಂದಿ:ಸಾ.ಸ.5:9(2024)ರ ನಿರ್ಣಯದಲ್ಲಿ ಈ ಬಗ್ಗೆ ಸಂಪೂರ್ಣ ದಾಖಲೆಗಳನ್ನು ಪರಿಶೀಲಿಸಲು ಹಾಗೂ ನಿರ್ಣಯಿಸಲು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಸೂಚಿಸಲಾಗಿದ್ದರೂ, ಈ ಸಭೆಗೆ ಮಂಡಿಸದಿರುವುದನ್ನು ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಎಸ್.ಬಿ.ಎಂ. ಪ್ರಸನ್ನ ಇವರು ಪ್ರಸ್ತಾಪಿಸಿ, ಈ ವಿಷಯದ ಕುರಿತು ಪೂರ್ಣ ವರದಿಯೊಂದಿಗೆ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಉಳಿದಂತೆ ನಡವಳಿಯನ್ನು ದೃಢೀಕರಿಸಲಾಯಿತು.**

**II. ಅನುಸರಣಾ ವರದಿಯ ಅನುಮೋದನೆ**

ದಿನಾಂಕ 20.07.2024ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

- **ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.**

**III. ಈ ಸಿಂಡಿಕೇಟು ಸಭೆಗೆ ಮಂಡಿಸಲಿರುವ ಕಾರ್ಯಸೂಚಿಗಳು.**

**ಕಾರ್ಯಸೂಚಿ ಸಂಖ್ಯೆ:** ಹಣಕಾಸು: ಸಾ.ಸ.6:1 (2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸ್ತುತ ಆರ್ಥಿಕ ಸ್ಥಿತಿಗತಿ ಹಾಗೂ ಇತರ ಹಣಕಾಸಿಗೆ ಸಂಬಂಧಿಸಿದ ವಿಷಯದ ಕುರಿತು ಚರ್ಚಿಸುವ ಬಗ್ಗೆ.

**ನಿರ್ಣಯ:** ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಎಸ್.ಬಿ.ಎಂ. ಪ್ರಸನ್ನ ಮತ್ತು ಡಾ.ಕೆ.ಸಿ. ಮಹದೇಶ ಇವರು ಹಣಕಾಸಿಗೆ ಸಂಬಂಧಿಸಿದ ವಿಷಯದ ಕುರಿತು ಚರ್ಚಿಸಲು ಆಯೋಜಿಸಿರುವ ಸಿಂಡಿಕೇಟಿನ ಸಭೆಯ ಕಾರ್ಯಸೂಚಿಗಳೊಂದಿಗೆ ಅನುಬಂಧಗಳನ್ನು ಇಮೈಲ್ ಮುಖಾಂತರ ಕಳುಹಿಸಿಕೊಡಲಾಗಿಲ್ಲವೆಂದು ಹಾಗೂ ಪೂರಕ ಕಾರ್ಯಸೂಚಿಗಳಿಗೆ ಅನುಬಂಧಗಳನ್ನು ಲಗತ್ತಿಸಿರುವುದಿಲ್ಲವೆಂದು ಆಕ್ಷೇಪಣೆ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಸದರಿ ಕಾರ್ಯಸೂಚಿಯನ್ನು ಮುಂದೂಡಲು ನಿರ್ಣಯಿಸಲಾಯಿತು. ಮುಂದಿನ ಸಭೆಗೆ ಅಗತ್ಯವಿರುವ ಸದಸ್ಯರಿಗೆ ಕಾರ್ಯಸೂಚಿಗಳು ಸೇರಿದಂತೆ ಅನುಬಂಧಗಳ hard copy ನೀಡಲು ನಿರ್ಣಯಿಸಿ, ಆರ್ಥಿಕ ಸ್ಥಿತಿಗತಿ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ಸದ್ಯದಲ್ಲಿಯೇ ವಿಶೇಷ ಸಿಂಡಿಕೇಟು ಸಭೆ ನಡೆಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.6:2 (2024)

ವಿಷಯ: ಸ್ನಾತಕೋತ್ತರ ಸೂಕ್ಷ್ಮಾಣು ಜೀವ ವಿಜ್ಞಾನ ಪ್ರೋಗ್ರಾಂ, ಜೀವ ವಿಜ್ಞಾನ ವಿಭಾಗಕ್ಕೆ ರಾಸಾಯನಿಕಗಳು/ ಗ್ಲಾಸ್‌ವೇರ್ / ಉಪಯೋಗಿ ವಸ್ತುಗಳನ್ನು ಖರೀದಿ ಪ್ರಸ್ತಾವನೆಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಮಾನ್ಯ ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರು ಈ ಬಗ್ಗೆ ಕೋರಿದ ಮಾಹಿತಿಯನ್ನು ಸಭೆಗೆ ಒದಗಿಸಿ ನಂತರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.6:3 (2024)

ವಿಷಯ: ಡಿಎಸ್ಟಿ-ಪರ್ಸ್ ಪ್ರೋಗ್ರಾಂನ ವಿವಿಧ ಸೌಲಭ್ಯಗಳ ಬಳಕೆಗೆ ಸಂಬಂಧಿಸಿ ಶುಲ್ಕ ಪರಿಷ್ಕರಣೆ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಬಳಿಕ ಅನುಮೋದಿಸಲಾಯಿತು. ಈ ಬಗ್ಗೆ ಡಾ.ಎಸ್.ಬಿ.ಎಂ. ಪ್ರಸನ್ನ ಇವರು ಮಾತನಾಡಿ ಸದರಿ ಸೌಲಭ್ಯಕ್ಕೆ ಸಂಬಂಧಿಸಿದ ಶುಲ್ಕ ಪರಿಷ್ಕರಣೆ ಮಾಡುವುದರಿಂದ ಈ ಘಟಕದ ಬಳಕೆಯಿಂದ ಬರುವ ಆದಾಯದಿಂದ ಖರ್ಚನ್ನು ಸರಿದೂಗಿಸಲು ಸಾಧ್ಯವೇ ಎಂಬುವ ಬಗ್ಗೆ ವಿವರವನ್ನು ಸಂಬಂಧಿಸಿದ ವಿಭಾಗದ ಮುಖ್ಯಸ್ಥರಿಂದ ಪಡೆದು ಸದಸ್ಯರಿಗೆ ಮಾಹಿತಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.6:4 (2024)

ವಿಷಯ: Annual liquid helium filling contract for Jeol JNM ECZ 400$MH_Z$ NMR Instrument ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.6:5 (2024)

ವಿಷಯ: Jeol JNM ECZ 400 MHZ NMR Instrument ನ್ನು ವಾರ್ಷಿಕ ನಿರ್ವಹಣೆಗೊಳಪಡಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಡಾ.ಎಸ್.ಬಿ.ಎಂ. ಪ್ರಸನ್ನ ಮತ್ತು ಡಾ. ಕೆ.ಸಿ. ಮಹದೇಶ ಇವರು ಸದರಿ ಕೇಂದ್ರದ ಸಂಯೋಜಕರಿಂದ 2023-24ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕೈಗೊಂಡಿರುವ ಸಂಪೂರ್ಣ ಚಟುವಟಿಕೆಗಳ ಸಮಗ್ರ ಮಾಹಿತಿಯನ್ನು ಪಡೆದು ಸದಸ್ಯರ ಗಮನಕ್ಕೆ ತರುವಂತೆ ನೀಡಿದ ಸಲಹೆಯನ್ನು ಪರಿಗಣಿಸಿ ನಂತರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.6:6 (2024

ವಿಷಯ: Class II, Type A2 Biological Safety Cabinets ಉಪಕರಣವನ್ನು ಖರೀದಿಸುವ ಇಂಡೆಂಟಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.6:7 (2024)

ವಿಷಯ: ಡಿಎಸ್ಟಿ-ಪರ್ಸ್ ಪ್ರಯೋಗಾಲಯ, Stage Board ನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ: ಸಾ.ಸ.6:8 (2024)

ವಿಷಯ: 2024-25ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಅಂತರ್ ವಿಶ್ವವಿದ್ಯಾನಿಲಯ ಕ್ರೀಡಾ ಚಟುವಟಿಕೆಗಳಿಗೆ ಟ್ರ್ಯಾಕ್ ಸೂಟ್‌ಗಳನ್ನು ಖರೀದಿಸುವ ಕುರಿತು.

**ನಿರ್ಣಯ:** ಅನುಮೋದಿಸಲಾಯಿತು. ಮುಂದುವರಿದು ಮಾನ್ಯ ಸದಸ್ಯರುಗಳಾದ ಶ್ರೀ ರಘುರಾಜ್ ಕದ್ರಿ ಹಾಗೂ ಜಂಟಿ ನಿರ್ದೇಶಕರು ಸರ್ಕಾರಿ ಕಾಲೇಜುಗಳಿಗೆ ನೀಡುತ್ತಿರುವ ಕ್ರೀಡಾ ಪ್ರೋತ್ಸಾಹ ಧನವನ್ನು ಹೆಚ್ಚಿಸಬೇಕು ಎಂದು ಸಲಹೆ ನೀಡಿದರು. ಕ್ರೀಡಾ ಶುಲ್ಕ ಸಂಗ್ರಹ ಮತ್ತು ಖರ್ಚಿನ ಮಾಹಿತಿಯನ್ನು ಮುಂದಿನ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ: ಸಾ.ಸ.6:9 (2024)

ವಿಷಯ: ಕೋರಾ ಬಟ್ಟೆ ಚೀಲ ಖರೀದಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ: ಸಾ.ಸ.6:10 (2024

ವಿಷಯ: BSR Infratech ಸಂಸ್ಥೆಯವರು ದಾಖಲಿಸಿರುವ Arbitrator ಪ್ರಕರಣವನ್ನು ನಿರ್ವಹಿಸಿರುವ ನ್ಯಾಯವಾದಿ ಶ್ರೀ ರಾಜೇಂದ್ರ ಕುಮಾರ್ ಸುಂಗೆ ಇವರ ಬಿಲ್ಲು ಪಾವತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಕಾಮಗಾರಿ ಅರ್ಧದಲ್ಲಿ ನಿಂತಿರುವ ಕಟ್ಟಡವನ್ನು ಖಾಸಗಿ ಸಂಸ್ಥೆಯವರು ಮುಂದೆ ಬಂದಲ್ಲಿ ದೀರ್ಘಾವಧಿ ಲೀಸ್ ನೀಡುವ ಬಗ್ಗೆ ಮಾನ್ಯ ಸದಸ್ಯರ ಸಲಹೆಗಳನ್ನು ಪಡೆದುಕೊಳ್ಳಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.6:11 (2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಟ್ಟಡಕ್ಕೆ ಪರವಾನಿಗೆ ಶುಲ್ಕ ಮತ್ತು ಪರವಾನಿಗೆ ಅವಧಿಯನ್ನು ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.6:12 (2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು M/s. Green Envy Healthcare Pvt. Ltd., ಮಂಗಳೂರು ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

**ನಿರ್ಣಯ:** ಮಾನ್ಯ ಸದಸ್ಯರುಗಳಾದ ಡಾ.ಕೆ..ಸಿ.ಮಹದೇಶ ಮತ್ತು ಶ್ರೀ ನಿತಿನ್ ಜೆ. ಶೆಟ್ಟಿ ಇವರು ಚರ್ಚಿಸಿ ಸದರಿ ಸಂಸ್ಥೆಯ ಕಾರ್ಯ ನಿರ್ವಹಣೆಯ ಬಗ್ಗೆ ಸಮಗ್ರ ಮಾಹಿತಿಯನ್ನು ಕೋರಿದರು. ಈ ಬಗ್ಗೆ ವಿಭಾಗದ ಅಧ್ಯಕ್ಷರಿಂದ ಸದರಿ ಸಂಸ್ಥೆಯ ಕಾರ್ಯ ಚಟುವಟಿಕೆಯ ಬಗ್ಗೆ ಹಾಗೂ ಸಂಸ್ಥೆ ಕಳೆದ ಐದು ವರ್ಷಗಳಿಂದ ನಡೆಸಿದ ಸಂಶೋಧನಾ ಚಟುವಟಿಕೆ ಬಗ್ಗೆ ವಿಸ್ತೃತ ವರದಿಯನ್ನು ಪಡೆದು ಮುಂದಿನ ಸಿಂಡಿಕೇಟು ಸಭೆಯಲ್ಲಿ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ: ಸಾ.ಸ.6:13 (2024)

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ನೂತನ ಪ್ರಭಾರ ಪ್ರಾಂಶುಪಾಲರ ನೇಮಕಾತಿಯ ಬಗ್ಗೆ ನಿಯಮಾವಳಿಯನ್ನು ಪರಿಶೀಲಿಸಿ ಕ್ರಮಕೈಗೊಳ್ಳುವುದಕ್ಕೆ ಸಂಬಂಧಿಸಿ ರಚಿಸಿದ ಸಮಿತಿ ಸಭೆಯ ನಡವಳಿ ಬಗ್ಗೆ.

**ನಿರ್ಣಯ:** ಮಾನ್ಯ ಸದಸ್ಯರಾದ ಡಾ.ಕೆ.ಸಿ.ಮಹದೇಶ ಇವರು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಬೋಧಕರ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವಂತೆ ಸೂಚಿಸಿದರು. ಖಾಯಂ ಪ್ರಾಂಶುಪಾಲರ ನೇಮಕಾತಿಯಾಗುವವರೆಗೆ ಡಾ. ಗಣಪತಿ ಗೌಡ ಇವರನ್ನು ತಾತ್ಕಾಲಿಕ ನೆಲೆಯಲ್ಲಿ ಪ್ರಾಂಶುಪಾಲರಾಗಿ ಮುಂದುವರಿಸಲು ಹಾಗೂ ಸದರಿ ಕಾಲೇಜಿನ ಬೋಧಕರು ಸಲ್ಲಿಸಿರುವ ಆಕ್ಷೇಪಣೆಗೆ ಸಂಬಂಧಿಸಿ ಸೂಕ್ತ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ: ಸಾ.ಸ.6:14 (2024

ವಿಷಯ: ಡಾ.ಡಿ.ಜೆ. ಮಾನಸ, ಸಹಾಯಕ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆಗೆ ಸಂಬಂಧಿಸಿ ವಿಶ್ವವಿದ್ಯಾನಿಲಯದ ಅಭಿಪ್ರಾಯ ನೀಡುವ ಬಗ್ಗೆ.

**ನಿರ್ಣಯ:** ವಿಸ್ತೃತವಾಗಿ ಚರ್ಚಿಸಿದ ಬಳಿಕ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು: ಸಾ.ಸ.6:15 (2024)

ವಿಷಯ: ಪದವಿ ಮಟ್ಟದ ಅಧ್ಯಯನ ಮಂಡಳಿಗಳ ಪುನರ್ರಚನೆಯ ಬಗ್ಗೆ

**ನಿರ್ಣಯ:** ಪದವಿ ಮಟ್ಟದ ಅಧ್ಯಯನ ಮಂಡಳಿಗಳನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.6:16(2024)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಅಗೋಸ್ತು/ಸೆಪ್ಟೆಂಬರ್ 2024ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರ ಸಲಹೆಯಂತೆ IQAC ಚಟುವಟಿಕೆಗಳ ಮುಖ್ಯಾಂಶಗಳ ವರದಿಯನ್ನು ಈ ಹಿಂದಿನ ಸಿಂಡಿಕೇಟು ಸಭೆಯಲ್ಲಿ ಮಂಡಿಸಿದಂತೆ ಪಿಪಿಟಿ ಮೂಲಕ ಪ್ರದರ್ಶಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು: ಸಾ.ಸ.6:17 (2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗದ ಅಧ್ಯಕ್ಷರ ಪ್ರಭಾರವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಿಗೆ ನೀಡಲು ನಿರ್ಣಯಿಸಲಾಯಿತು. ಸಾಗರ ಭೂವಿಜ್ಞಾನ ವಿಭಾಗದ ಅಧ್ಯಕ್ಷರ ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ: ಸಾ.ಸ.6:18 (2024)

ವಿಷಯ: ಜೂನ್/ಜುಲೈ 2024ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ: ಸಾ.ಸ.6:19 (2024

ವಿಷಯ: ಜನವರಿ/ಫೆಬ್ರವರಿ 2024ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು - ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಸಾ.ಸ.6:20(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಅರ್ಹ ಸಂಯೋಜಿತ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವುದಕ್ಕೆ ಸಂಬಂಧಿಸಿದಂತೆ ಸ್ಥಾಯಿ ಸಮಿತಿ ರಚನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಮುಂದುವರಿದು, ಸದರಿ ಸ್ಥಾಯಿ ಸಮಿತಿಗೆ ಶ್ರೀಮತಿ ಜೂಡಿತ್ ಮೆಂಡೊನ್ಸ ಇವರನ್ನು ಸಿಂಡಿಕೇಟಿನ ನಾಮನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ: ಸಾ.ಸ.6:21 (2024)

ವಿಷಯ: ಡಾ.ಶಾಮಸುಂದರ್ ಜೆ., ಸಹಾಯಕ ಪ್ರಾಧ್ಯಾಪಕರು, ಜ್ಞಾನಕಾವೇರಿ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಮಾನವ ಪ್ರಜ್ಞೆ ಹಾಗೂ ಯೋಗವಿಜ್ಞಾನ ವಿಭಾಗಕ್ಕೆ ವರ್ಗಾವಣೆ ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು: ಸಾ.ಸ.6:22(2024)

ವಿಷಯ: ಡಾ.ಕೆ.ಸಿ.ಮಹದೇಶ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

**ವಿಷಯ** 1) ಮಂಗಳೂರು ವಿಶ್ವವಿದ್ಯಾನಿಲಯದ ಅಧಿಕೃತ ಕಾರ್ಯಕ್ರಮಗಳಲ್ಲಿ ಭಾಗವಹಿಸುವ, ಆಹ್ವಾನಿಸುವ ವಿಷಯದಲ್ಲಿ ಮಾನ್ಯ ಕುಲಪತಿಗಳು, ಕುಲಸಚಿವರು, ಪರೀಕ್ಷಾಂಗ ಕುಲಸಚಿವರು, ಮಾನ್ಯ ಸಿಂಡಿಕೇಟ್ ಸದಸ್ಯರು, ಇತರೆ ಅಧಿಕಾರಿ ವರ್ಗದವರು, ಇವರ ಜವಾಬ್ದಾರಿಯ ಕುರಿತು ಚರ್ಚಿಸಿ ನಿರ್ಣಯಿಸಲು ಕೋರಿದೆ.

**ನಿರ್ಣಯ :** ಈ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು. ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕೃತ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ತಪ್ಪದೆ ನೀಡಲು ಹಾಗೂ ಪ್ರಮುಖ ಕಾರ್ಯಕ್ರಮಗಳಿಗೆ ವಿಶ್ವವಿದ್ಯಾನಿಲಯದಿಂದ ನಿಯೋಜಿಸಿದ ಸಂಯೋಜನಾ ಅಧಿಕಾರಿಗಳು ದೂರವಾಣಿ ಮೂಲಕ ಆಹ್ವಾನಿಸಲು ನಿರ್ಣಯಿಸಲಾಯಿತು.

**ವಿಷಯ:** 2) 2024-25 ರ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಶುಲ್ಕ ನಿಗದಿ ಬಗ್ಗೆ ಚರ್ಚಿಸಲು ಕೋರಿದೆ.

**ನಿರ್ಣಯ :** ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಕೆ.ಸಿ. ಮಹದೇಶ ರವರ ಮೆರಿಟ್ ಆಧಾರಿತ ಪ್ರವೇಶಾತಿಗಳಿಗೆ ಶುಲ್ಕವನ್ನು ಹೆಚ್ಚಿಸದೇ 2023-24ನೇ ಸಾಲಿನಲ್ಲಿದ್ದಂತೆಯೇ ಶುಲ್ಕವನ್ನು ವಿಧಿಸಬೇಕಾಗಿತ್ತು. ಈ ಬಾರಿಯ ಶುಲ್ಕ ಪರಿಷ್ಕರಣೆಯಿಂದ ಮೆರಿಟ್ ಆಧಾರಿತ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗುತ್ತಿದೆ. ಹಾಗಾಗಿ ಸಾಮಾಜಿಕ ನ್ಯಾಯದ ಅಡಿಯಲ್ಲಿ ಹಿಂದಿನ ವರ್ಷದ ಶುಲ್ಕವನ್ನು ಮುಂದುವರಿಸಿ ಆ ವರ್ಗದ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಬೇಕೆಂದು ಮನವಿ ಮಾಡಿದರು.

ಸರ್ಕಾರದ ನಿಯಮದಂತೆ ಶುಲ್ಕವನ್ನು ಪರಿಷ್ಕರಣೆ ಮಾಡಲಾಗಿದೆ ಎಂದು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು. ಪ್ರಸ್ತುತ ವರ್ಷಕ್ಕೆ ನಿಗದಿಪಡಿಸಲಾದ ಶುಲ್ಕಗಳನ್ನು ಮುಂದುವರಿಸಲು ನಿರ್ಣಯಿಸಲಾಯಿತು.

**ವಿಷಯ:** 3) ಪಿಎಂ ಉಷಾ ಸ್ಕೀಂನಡಿಯಲ್ಲಿ ವಿಶ್ವವಿದ್ಯಾನಿಲಯದ ಯಾವ ಯಾವ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅಭಿವೃದ್ಧಿ ಪಡಿಸುವ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯಿಸಲು ಕೋರಿದೆ, ಇದರ ಸಮಗ್ರ ಮಾಹಿತಿಯನ್ನು ಸಭೆಗೆ ತಿಳಿಸಲು ಕೋರಿದೆ.

**ನಿರ್ಣಯ:** ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಚರ್ಚಿಸಲು ಕರೆಯಲಾಗುವ, ಮುಂದಿನ ವಿಶೇಷ ಸಿಂಡಿಕೇಟು ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಯಿತು.

| | |
|---|---|
| **ವಿಷಯ:** | 4) ಅತಿಥಿ ಉಪನ್ಯಾಸಕರ ಮತ್ತು ಹೊರಗುತ್ತಿಗೆ ನೌಕರರ ಸಂಬಳವನ್ನು ಬಾಕಿ ಉಳಿಸಿಕೊಂಡಿರುವ ಮತ್ತು ನಿವೃತ್ತ ಪ್ರಾಧ್ಯಾಪಕರ ನಿವೃತ್ತಿ ವೇತನದ ಬಾಕಿಯ ಬಗ್ಗೆ ಹಾಗೂ ಅತಿಥಿ ಉಪನ್ಯಾಸಕರ ಮಾರ್ಗಸೂಚಿ ಸಭೆಯು ಸಂಪೂರ್ಣವಾಗದೇ ಇದ್ದು, ಈ ವಿಷಯವಾಗಿ ಚರ್ಚಿಸಲು ಮತ್ತು ಹೊರಗುತ್ತಿಗೆ ನೌಕರರ ಟೆಂಡರ್ ಪ್ರಕ್ರಿಯೆ ಬಗ್ಗೆ ಚರ್ಚಿಸಲು ಮತ್ತು ನಿರ್ಣಯಿಸಲು ಕೋರಿದೆ. |
| **ನಿರ್ಣಯ:** | ಹೊರಗುತ್ತಿಗೆ ನೌಕರರಿಗೆ ಬಾಕಿ ಉಳಿದಿರುವ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಸಂಬಳವನ್ನು ಪಾವತಿಸಲು ಮನವಿ ಮಾಡಿದರು. ಅಧ್ಯತೆಯ ಮೇರೆಗೆ ಬಾಕಿ ಉಳಿದಿರುವ ಸಂಬಳವನ್ನು ನೀಡಲು ನಿರ್ಣಯಿಸಲಾಯಿತು.<br>ಅತಿಥಿ ಉಪನ್ಯಾಸಕರ ಹೊಸ ಮಾರ್ಗಸೂಚಿಯನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು. |
| **ವಿಷಯ:** | 5) ಇದುವರೆಗೆ ವಿಶ್ವವಿದ್ಯಾನಿಲಯದ ಪ್ರತಿ ತಿಂಗಳ ಆದಾಯ ಮತ್ತು ಖರ್ಚುಗಳು ಮಾಹಿತಿಯನ್ನು ಪ್ರತಿ ಸಿಂಡಿಕೇಟ್ ಸಭೆಯಲ್ಲಿ ಕೇಳಿದರು ಸಮರ್ಪಕ ಉತ್ತರ ದೊರೆಯದ ಕಾರಣ, ಇದರ ಬಗ್ಗೆ ಸಮರ್ಪಕ ಚರ್ಚೆಯನ್ನು ಮಾಡಿ ವಿಶ್ವವಿದ್ಯಾನಿಲಯದ ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ನಿರ್ಣಯಿಸಲು ಕೋರಿದೆ. |
| **ನಿರ್ಣಯ:** | ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಚರ್ಚಿಸಲು ಕರೆಯಲಾಗುವ, ಮುಂದಿನ ವಿಶೇಷ ಸಿಂಡಿಕೇಟು ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಂಡಿಕೇಟು: ಸಾ.ಸ.6:23(2024) |
| ವಿಷಯ: | ಶ್ರೀ ಸುರೇಶ್ ಕುಮಾರ್ ಬಿ. ನಾವೂರು, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ**.** |
| **ವಿಷಯ:** | 1) ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮದಲ್ಲಿ ನಿರ್ದೇಶಿಸಲ್ಪಟ್ಟಿರುವಂತೆ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ವಿಚಾರಗಳಲ್ಲಿ ಸಿಂಡಿಕೇಟ್ ಸದಸ್ಯರಿಗಿರುವ ಪ್ರಾಮುಖ್ಯತೆ ಮತ್ತು ಪಾತ್ರಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲು ಕ್ರಮವಹಿಸುವುದು. |
| **ನಿರ್ಣಯ :** | ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ವಿಚಾರಗಳಲ್ಲಿ ಸಿಂಡಿಕೇಟಿಗೆ ಇರುವ ಪ್ರಾಮುಖ್ಯತೆಗಳ ಬಗ್ಗೆ ವಿಶ್ವವಿದ್ಯಾನಿಲಯದ ಅಧಿನಿಯಮ ಮತ್ತು ಪರಿನಿಯಮಗಳಂತೆ ಮಾನ್ಯತೆ ನೀಡುವ ವಿಚಾರವನ್ನು ಸಭೆಗೆ ತಿಳಿಸಲಾಯಿತು. |
| **ವಿಷಯ:** | 2) ಅಂತರಾಷ್ಟ್ರೀಯ ವಸತಿ ನಿಲಯದ ಕಾಮಗಾರಿಯಲ್ಲಿ ಆಗಿರುವ ಲೋಪಗಳ ಬಗ್ಗೆ ಕ್ರಮ ತೆಗೆದುಕೊಳ್ಳಲು ಸೂಕ್ತ ಕ್ರಮವಹಿಸುವಲ್ಲಿ ಕಾರ್ಯಪ್ರವೃತ್ತವಾಗುವುದು. |
| **ನಿರ್ಣಯ:** | ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಚರ್ಚಿಸಲು ಕರೆಯಲಾಗುವ, ಮುಂದಿನ ವಿಶೇಷ ಸಿಂಡಿಕೇಟು ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಚರ್ಚಿಸಲು ತೀರ್ಮಾನಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಡಿಇವಿ: ಸಾ.ಸ.6:24(2024) |
| ವಿಷಯ: | ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಯೋಗ ಚಿಕಿತ್ಸಾ ಕೇಂದ್ರವನ್ನು ಸ್ಥಗಿತಗೊಳಿಸುವ ಬಗ್ಗೆ. |
| **ನಿರ್ಣಯ:** | ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಮತ್ತು ಡಾ.ಎಸ್.ಬಿ.ಎಂ. ಪ್ರಸನ್ನ ಇವರು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಯೋಗ ಚಿಕಿತ್ಸಾ ಕೇಂದ್ರವನ್ನು ಸ್ಥಗಿತಗೊಳಿಸದಂತೆ ವಿನಂತಿಸುತ್ತಾ ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರಗಳು ಯೋಗ ವಿಜ್ಞಾನಕ್ಕೆ ಪ್ರಾಮುಖ್ಯತೆ ನೀಡುತ್ತಾ ಭಾರತ ದೇಶವನ್ನು ಯೋಗದಲ್ಲಿ ವಿಶ್ವ ಗುರುವಾಗಿಸುತ್ತಿರುವ ಈ ಸಂದರ್ಭದಲ್ಲಿ ನಗರ ಪ್ರದೇಶದಲ್ಲಿರುವ ಈ ಯೋಗ ಚಿಕಿತ್ಸಾ ಕೇಂದ್ರಕ್ಕೆ ವ್ಯಾಪಕ ಪ್ರಚಾರ ನೀಡುವ ಮೂಲಕ ಜನಸಾಮಾನ್ಯರಿಗೆ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಕಡಿಮೆ ವೆಚ್ಚದ್ದಲ್ಲಿ ಸಿಗುತ್ತಿದ್ದ ಸೌಲಭ್ಯವನ್ನು ವಿಶ್ವವಿದ್ಯಾನಿಲಯವು ಮುಂದುವರಿಸುವಂತೆ ಸಲಹೆ ನೀಡಿದರು.<br><br>ಮಾನ್ಯ ಕುಲಪತಿಯವರು ಈ ಬಗ್ಗೆ ಮಾಹಿತಿ ನೀಡುತ್ತಾ ನಗರ ಪ್ರದೇಶದಲ್ಲಿರುವ ಈ ಯೋಗ ಚಿಕಿತ್ಸಾ ಕೇಂದ್ರದ ಅಸುಪಾಸಿನಲ್ಲಿಯೇ ಹಲವು ಅಂತರಾಷ್ಟ್ರೀಯ ಗುಣಮಟ್ಟದ ಅತ್ಯುತ್ತಮ ಯೋಗ ಚಿಕಿತ್ಸಾ ಕೇಂದ್ರಗಳು ಇರುವುದರಿಂದ ಹಾಗೂ ನಮ್ಮ ಯೋಗ ಚಿಕಿತ್ಸಾ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಸಂಖ್ಯೆ ತೀವ್ರ ಕಡಿಮೆಯಿದ್ದು ಚಿಕಿತ್ಸಾ ಕೇಂದ್ರದ ನಿರ್ವಹಣಾ ವೆಚ್ಚವೇ ಅಧಿಕವಾಗಿದೆ. ಈ ಹಿನ್ನೆಲೆಯಲ್ಲಿ ಆರ್ಥಿಕ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಯೋಗ ಚಿಕಿತ್ಸಾ ಕೇಂದ್ರದೊಂದಿಗೆ ಸದರಿ ಕೇಂದ್ರವನ್ನು ವಿಲೀನಗೊಳಿಸಲು ನಿರ್ಣಯಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಡಿಇವಿ: ಸಾ.ಸ.6:25(2024) |
| ವಿಷಯ: | 2024-25ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಕ್ಕೆ ಅಗತ್ಯವಿರುವ ಅತಿಥಿ ಉಪನ್ಯಾಸಕರ ನೇಮಕಾತಿ ಕುರಿತು. |
| **ನಿರ್ಣಯ:** | ಆಯ್ಕೆಯಾದ ಅತಿಥಿ ಉಪನ್ಯಾಸಕರ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲು ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಕೆ.ಸಿ. ಮಹದೇಶ ಅವರು ಕೋರಿದರು. ಈ ಬಗ್ಗೆ ಆಯ್ಕೆ ಪಟ್ಟಿಯನ್ನು ನೀಡಲು ಸಮ್ಮತಿಸಿ ಅನುಮೋದಿಸಲಾಯಿತು. |

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.6:26(2024)

ವಿಷಯ: NMR ಪ್ರಯೋಗಾಲಯದಲ್ಲಿರುವ ಉಪಕರಣಗಳ ಬಳಕೆಗೆ ಸಂಬಂಧಿಸಿ ಮಾರ್ಗಸೂಚಿ ತಯಾರಿಸಲು ರಚಿಸಿದ ಸಮಿತಿ ಸಭೆಯ ನಡವಳಿಯ ಬಗ್ಗೆ.

**ನಿರ್ಣಯ:** ಹಿಂದಿನ ಸಾಲಿನ ಆದಾಯ ಮತ್ತು ಖರ್ಚು ವೆಚ್ಚಗಳ ತುಲನಾತ್ಮಕ ತ:ಖ್ತೆಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ: ಸಾ.ಸ.6:27(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೇರ ನೇಮಕಾತಿಯಡಿ ಖಾಲಿಯಿದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಗೊಳಿಸುವ ಬಗ್ಗೆ.

**ನಿರ್ಣಯ:** ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಗೊಳಿಸುವ ಬಗ್ಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಪರಿಶೀಲಿಸಿ, ನಂತರ ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ನೀಡಿದ ಸಲಹೆಯನ್ನು ಪರಿಗಣಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು: ಸಾ.ಸ.6:28(2024)

ವಿಷಯ: ಸ್ನಾತಕೋತ್ತರ/ಸಂಯುಕ್ತ (ಪದವಿ/ಸ್ನಾತಕೋತ್ತರ) ಅಧ್ಯಯನ ಮಂಡಳಿಗಳ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ/ಸಂಯುಕ್ತ (ಪದವಿ/ಸ್ನಾತಕೋತ್ತರ) ಅಧ್ಯಯನ ಮಂಡಳಿಗಳ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ಸಾ.ಸ.6:29(2024)

ವಿಷಯ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಎ.ಟಿ.ಎಂ. ಕಟ್ಟಡದ ಮಾಸಿಕ ಪರವಾನಿಗೆ ಶುಲ್ಕ ಮತ್ತು ಅವಧಿ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.6:30(2024)

ವಿಷಯ: ಶ್ರೀ ಕೆ. ರಾಜು ಮೊಗವೀರ, ಕುಲಸಚಿವರು (ಆಡಳಿತ) ಇವರ ವೈದ್ಯಕೀಯ ವೆಚ್ಚದ ಮರುಭರಣೆ ಕುರಿತು.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.6:31(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ/ಘಟಕ/ಸ್ವಾಯತ್ತ/ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಜೇಷ್ಠತಾ ಪಟ್ಟಿಯ Hard Copyಯನ್ನು ಸಿಂಡಿಕೇಟು ಸದಸ್ಯರಿಗೆ ನೀಡಲು ನಿರ್ಣಯಿಸಿ, ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.6:32(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ ಕಾಲೇಜುಗಳಿಗೆ ಅಗತ್ಯವಿರುವ ಕಂಪ್ಯೂಟರ್ ಪ್ರಿಂಟರ್‌ಗಳ ಟೋನರ್ ರೀಫಿಲ್ಲಿಂಗ್ ಹಾಗೂ ಡ್ರಮ್ ಬದಲಾವಣೆ ಬಗ್ಗೆ.

**ನಿರ್ಣಯ:** ಇನ್ನೊಮ್ಮೆ ಖರೀದಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.6:33(2024)

ವಿಷಯ: 2024ನೇ ಸಾಲಿನ ಪದವಿ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಉತ್ತರ ಪತ್ರಿಕೆಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ-ಟೆಂಡರು ಮೂಲಕ ಖರೀದಿಸುವ ಬಗ್ಗೆ.

**ನಿರ್ಣಯ:** ಡಾ. ಎಸ್.ಬಿ.ಎಂ. ಪ್ರಸನ್ನ ರವರು ಸದರಿ ಕಾರ್ಯಸೂಚಿಯನ್ನು ಇನ್ನೊಮ್ಮೆ ಖರೀದಿ ಸಮಿತಿಗೆ ಮಂಡಿಸಲು ಸಲಹೆ ನೀಡಿದರು. ಖರೀದಿ ಸಮಿತಿಯ ಅಭಿಪ್ರಾಯ ಪಡೆದ ನಂತರ ಪರೀಕ್ಷಾ ಕಾರ್ಯಗಳಿಗೆ ತೀರಾ ಅಗತ್ಯವಿರುವ ಉತ್ತರ ಪತ್ರಿಕೆಗಳನ್ನು ತುರ್ತು ಖರೀದಿಸಿ, ಮುಂದಿನ ವಿಶೇಷ ಸಿಂಡಿಕೇಟು ಸಭೆಯ ಘಟನೋತ್ತರ ಅನುಮೋದನೆಗೆ ಕಾರ್ಯಸೂಚಿಯನ್ನು ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.6:34(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ ಅಗತ್ಯವಿರುವ Software for remote Access Facility ಖರೀದಿಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಇನ್ನೊಮ್ಮೆ ಖರೀದಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾ.ಸ.6:35(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಭದ್ರತಾ ವ್ಯವಸ್ಥೆಗೆ ಸಿಬ್ಬಂದಿಗಳನ್ನು ಪಡೆದುಕೊಳ್ಳುವ ಬಗ್ಗೆ.

**ನಿರ್ಣಯ:** ಇನ್ನೊಮ್ಮೆ ಖರೀದಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.6:36(2024)

ವಿಷಯ: ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ - ಪದವಿ (ಮೊದಲನೇ ಚತುರ್ಮಾಸ) ಪಠ್ಯಪುಸ್ತಕಗಳನ್ನು ಮುದ್ರಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಇನ್ನೊಮ್ಮೆ ಖರೀದಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.6:37(2024)

ವಿಷಯ: Quartz Furnance ಉಪಕರಣವನ್ನು ಖರೀದಿಸುವ ಇಂಡೆಂಟಿಗೆ ಮಂಜೂರಾತಿ ನೀಡುವ ನೀಡುವ ಬಗ್ಗೆ.

**ನಿರ್ಣಯ:** ಇನ್ನೊಮ್ಮೆ ಖರೀದಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.6:38(2024)

ವಿಷಯ: Ozone Generator along with Oxygen Concentrator ಉಪಕರಣವನ್ನು ಖರೀದಿಸುವ ಇಂಡೆಂಟಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಇನ್ನೊಮ್ಮೆ ಖರೀದಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.6:39(2024)

ವಿಷಯ: CARER ಕೇಂದ್ರದ ಪ್ರಯೋಗಾಲಯಕ್ಕೆ ಅಗತ್ಯವಿರುವ ವಿಶೇಷ ಗ್ಲಾಸ್‌ವೇರ್‌ಗಳನ್ನು ಖರೀದಿಸುವ ಇಂಡೆಂಟಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಇನ್ನೊಮ್ಮೆ ಖರೀದಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.6:40(2024)

ವಿಷಯ: SERB ಪ್ರಾಜೆಕ್ಟ್, ಭೌತಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ಪ್ರಾಜೆಕ್ಟ್‌ಗೆ ಅಗತ್ಯವಿರುವ Potentistat/Galvanostat for Supercapacitor & Sensor Measurement with Accessories ನ್ನು ಖರೀದಿಸುವ ಬಗ್ಗೆ.

**ನಿರ್ಣಯ:** ಇನ್ನೊಮ್ಮೆ ಖರೀದಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.6:41(2024)

ವಿಷಯ: CARER ಕೇಂದ್ರದಲ್ಲಿರುವ Radon Calibration Chamber ಉಪಕರಣದ Comprehensive ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸುವ ಬಗ್ಗೆ.

**ನಿರ್ಣಯ:** ಇನ್ನೊಮ್ಮೆ ಖರೀದಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.6:42(2024)

ವಿಷಯ: Consultancy ಕಾರ್ಯವನ್ನು ಒದಗಿಸಿದ ಬಿಲ್ಲಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಇನ್ನೊಮ್ಮೆ ಖರೀದಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಇತರೆ ವಿಷಯಗಳು:**

1) ಮುಂದಿನ ದಿನಗಳಲ್ಲಿ ಯಾವುದೇ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಸದರಿ ಸಂಸ್ಥೆಗಳ ಪೂರ್ವಾಪರ ಮಾಹಿತಿ ಮತ್ತು ಆ ಸಂಸ್ಥೆಗಳು ಕಳೆದ ಐದು ವರ್ಷದಲ್ಲಿ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ನೀಡಿದ ಕೊಡುಗೆಯ ವರದಿಯೊಂದಿಗೆ ಒಡಂಬಡಿಕೆಗಳ ಪ್ರಸ್ತಾವನೆಗಳನ್ನು ಮಂಡಿಸುವುದು.

2) ಸಿಂಡಿಕೇಟು ಸಭೆಗಳಿಗೆ ಕಾರ್ಯಸೂಚಿಗಳನ್ನು ಮಂಡಿಸುವಾಗ ಕಾರ್ಯಸೂಚಿಗಳೊಂದಿಗೆ ಅದಕ್ಕೆ ಸಂಬಂಧಿಸಿದ ಎಲ್ಲಾ ಅನುಬಂಧಗಳನ್ನು Hard Copy ನೀಡಬೇಕು ಮತ್ತು ಕಾರ್ಯಸೂಚಿ ಹಾಗೂ ಅನುಬಂಧಗಳನ್ನು ಕನಿಷ್ಠ ಒಂದು ವಾರ ಮುಂಚಿತವಾಗಿ ಎಲ್ಲಾ ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ಕಳುಹಿಸಿಕೊಡುವಂತೆ ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ.ಕೆ.ಸಿ. ಮಹದೇಶರವರು ಕೋರಿದರು. ಈ ಬಗ್ಗೆ ಮಾನ್ಯ ಕುಲಪತಿಗಳು ಇನ್ನು ಮುಂದೆ ಸಿಂಡಿಕೇಟ್ ಸದಸ್ಯರುಗಳಿಗೆ ಸಂಬಂಧಪಟ್ಟ ಕಾರ್ಯಸೂಚಿ ಹಾಗೂ ಅನುಬಂಧಗಳನ್ನು ಒಂದು ವಾರ ಮುಂಚಿತವಾಗಿ ಕಳುಹಿಸಿಕೊಡಲಾಗುವುದು ಎಂದು ಸಭೆಗೆ ತಿಳಿಸಿದರು.

3) ಸಿಂಡಿಕೇಟು ಸಭೆಗಳಿಗೆ ಕಾರ್ಯಸೂಚಿಗಳನ್ನು ಮಂಡಿಸುವಾಗ ಕಾರ್ಯಸೂಚಿಗಳೊಂದಿಗೆ ಖರೀದಿ ಸಮಿತಿ, ತಾಂತ್ರಿಕ ಸಮಿತಿ ಮುಂತಾದವುಗಳು ನಡೆದ ದಿನಾಂಕ, ನಿರ್ಣಯ ಹಾಗೂ ಪ್ರಕ್ರಿಯೆ ಪ್ರಾರಂಭಿಸಿದ ವಿಭಾಗದ ಅಧ್ಯಕ್ಷರು / ಸಂಯೋಜಕರು ಮತ್ತು ಸಂಬಂಧಪಟ್ಟವರ ಹೆಸರು ಹಾಗೂ ಪದನಾಮಗಳನ್ನು ಉಲ್ಲೇಖಿಸುವುದರೊಂದಿಗೆ ಕಾರ್ಯಸೂಚಿಯಲ್ಲಿ ಸಮಗ್ರ ಮಾಹಿತಿ ಒಳಗೊಂಡಿರುವುದನ್ನು ಖಚಿತಪಡಿಸಲು ಸಹಾಯಕ ಕುಲಸಚಿವರು ಮತ್ತು ಅಧೀಕ್ಷಕರ ಮಟ್ಟದಲ್ಲಿ ಮುತುವರ್ಜಿ ವಹಿಸುವುದು.

4) ಇನ್ನು ಮುಂದೆ ಖರೀದಿ ಸಮಿತಿಗಳ ಕಾರ್ಯಸೂಚಿಗಳನ್ನು ಸಭೆ ನಡೆಯುವ ಕನಿಷ್ಠ ಒಂದು ವಾರ ಮೊದಲು ಸದಸ್ಯರಿಗೆ ತಲುಪುವಂತೆ ಕ್ರಮಕೈಗೊಳ್ಳಲು ಖರೀದಿ ಸಮಿತಿ ಸದಸ್ಯರೂ ಆಗಿರುವ ಶ್ರೀ ಸುರೇಶ್ ಕುಮಾರ್ ಬಿ. ನಾವೂರು ಇವರು ನೀಡಿರುವ ಸಲಹೆಯನ್ನು ಪರಿಗಣಿಸಲಾಯಿತು.

5) ಸಿಂಡಿಕೇಟು ಸಭೆಯಲ್ಲಿ ಮುಂದಿನ ಸಭೆಗೆ ಮುಂದೂಡಲಾದ ಕಾರ್ಯಸೂಚಿಗಳನ್ನು ಮಂಡಿಸದೇ ಇರುವುದು ಸಭೆಯ ಗಮನಕ್ಕೆ ಬಂದಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.

6) ಟೇಬಲ್ ಅಜೆಂಡಾಗಳನ್ನು ಆದಷ್ಟು ಕಡಿತಗೊಳಿಸುವುದು ಹಾಗೂ ಅತೀ ಅಗತ್ಯವಿರುವ ವಿಷಯವನ್ನು ಟೇಬಲ್ ಅಜೆಂಡಾವನ್ನಾಗಿ ಮಂಡಿಸಿದ್ದಲ್ಲಿ ಸದರಿ ಕಾರ್ಯಸೂಚಿ ಮತ್ತು ಅನುಬಂಧಗಳ hard Copy ಯನ್ನು ಎಲ್ಲಾ ಸದಸ್ಯರಿಗೆ ಒದಗಿಸಲು ನಿರ್ಣಯಿಸಲಾಯಿತು.

7) ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ಬಗ್ಗೆ ಸರ್ಕಾರಕ್ಕೆ ಬರೆದಿರುವ ಪತ್ರಗಳ ಪ್ರತಿಗಳನ್ನು ಕುಲಾಧಿಪತಿಗಳ / ಸರ್ಕಾರದ ನಾಮನಿರ್ದೇಶಿತ ಸಿಂಡಿಕೇಟು ಸದಸ್ಯರಿಗೆ ನೀಡಲು ನಿರ್ಣಯಿಸಲಾಯಿತು.

8) ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ನಿತಿನ್ ಜೆ.ಶೆಟ್ಟಿ ಇವರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ಆಂತರಿಕ ಆಡಿಟ್ ಮೂಲಕ ಹಣಕಾಸು ಶಿಸ್ತನ್ನು ಕಾಪಾಡುವುದು ಆವಶ್ಯಕವಾಗಿದೆ. ಪ್ರಸ್ತುತ ಹಣಕಾಸು ವಿಭಾಗದಲ್ಲಿ ಸಿಂಗಲ್ ಎಂಟ್ರಿ ಸಿಸ್ಟಂ ನಿರ್ವಹಿಸುತ್ತಿದ್ದು ಇದನ್ನು ಡಬಲ್ ಎಂಟ್ರಿ ಸಿಸ್ಟಂ ಅಳವಡಿಸಿಕೊಳ್ಳುವ ಮೂಲಕ ಆರ್ಥಿಕ ಸ್ಥಿತಿಗತಿಗಳ ಸ್ಪಷ್ಟ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಎಂದರು. ಈ ಬಗ್ಗೆ ಪರಿಣಿತ ಸಂಸ್ಥೆಗಳ ನೆರವು ಪಡೆದುಕೊಳ್ಳುವಂತೆ ನೀಡಿದ ಸಲಹೆಯನ್ನು ಪರಿಶೀಲಿಸಲು ನಿರ್ಣಯಿಸಲಾಯಿತು.

9) ಕಾಲೇಜುಗಳಿಗೆ ಸಂಯೋಜನೆ ನೀಡುವ ಬಗ್ಗೆ ಭೇಟಿ ನೀಡುವ ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಗಳು ಆಯಾ ಕಾಲೇಜುಗಳಲ್ಲಿ ಕಳೆದ ಐದು ಶೈಕ್ಷಣಿಕ ವರ್ಷಗಳಲ್ಲಿ ಅನುಮೋದಿತ ವಿದ್ಯಾರ್ಥಿಗಳ ಪರಿಮಿತಿ ಹಾಗೂ ವ್ಯಾಸಂಗ ಮುಂದುವರಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಇವುಗಳ ತುಲನಾತ್ಮಕ ಅಂಕಿ ಅಂಶಗಳನ್ನು ಪರಿಶೀಲನೆ ನಡೆಸಿ ಸಂಯೋಜನೆಗೆ ಶಿಫಾರಸ್ಸು ಮಾಡಲು ಸೂಚಿಸುವಂತೆ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ನೀಡಿದ ಸಲಹೆಯನ್ನು ಪರಿಗಣಿಸಲಾಯಿತು.

10) ಮಾನ್ಯ ಸದಸ್ಯರಾದ ಶ್ರೀ ಸುರೇಶ್ ಕುಮಾರ್ ಬಿ. ನಾವೂರು ಇವರು ಬೋಧಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿ ಪ್ರಕಟಣೆಯ ಬಗ್ಗೆ ಪ್ರಸ್ತಾಪಿಸಿದ ವಿಚಾರಕ್ಕೆ ಸಂಬಂಧಿಸಿದಂತೆ, ಸಮಾಜ ಕಲ್ಯಾಣ ಇಲಾಖೆಯ ಮಾರ್ಗಸೂಚಿಯಂತೆ ಜೇಷ್ಠತಾ ಪಟ್ಟಿಯನ್ನು ತಯಾರಿಸಲಾಗುತ್ತಿದೆ ಎಂಬ ಮಾಹಿತಿಯನ್ನು ಮಾನ್ಯ ಕುಲಪತಿಯವರು ಸಭೆಗೆ ನೀಡಿದರು.

11) ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಕೆ. ರಘುರಾಜ್ ಇವರು ಫಲಿತಾಂಶಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಪ್ರಾಂಶುಪಾಲರುಗಳು ಅನಗತ್ಯವಾಗಿ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಅಲೆಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ವಿದ್ಯಾರ್ಥಿಗಳ ದೂರುಗಳನ್ನು ಆಯಾ ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಹಂತದಲ್ಲಿಯೇ ಪರಿಶೀಲಿಸುವುದು. ಅಗತ್ಯವಿದ್ದಲ್ಲಿ ಮಾತ್ರ ಅಂತಹ ವಿದ್ಯಾರ್ಥಿಗಳನ್ನು ಪ್ರಾಂಶುಪಾಲರ ಸೂಕ್ತ ಷರಾದೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿಕೊಡುವಂತೆ ಸೂಚಿಸಿ ಎಲ್ಲಾ ಪ್ರಾಂಶುಪಾಲರುಗಳಿಗೆ ಪರೀಕ್ಷಾಂಗ ಕಛೇರಿಯಿಂದ ಸುತ್ತೋಲೆ ಹೊರಡಿಸಲು ನಿರ್ಣಯಿಸಲಾಯಿತು.

12) ಪೂರ್ಣಕಾಲಿಕ ನೆಲೆಯಲ್ಲಿ ಹಣಕಾಸು ಅಧಿಕಾರಿಯವರನ್ನು ಕರ್ನಾಟಕ ಸರ್ಕಾರದ ಲೆಕ್ಕ ಪತ್ರ ಇಲಾಖೆಯಿಂದ ನೇಮಕ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಲಾಯಿತು.

**ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.**

| | |
|---|---|
| ಸಹಿ/- | ಸಹಿ/- |
| **ಕುಲಸಚಿವರು** | **ಕುಲಪತಿಯವರು** |